## (ix) ಖಾಸಗಿ ಮತ್ತು ಸರ್ಕಾರಿ ವಾಹನಗಳ ಮೇಲೆ ಕನ್ನಡದಲ್ಲಿ ನಾಮಫಲಕಗಳನ್ನು ಬರೆದಿರುವ ಬಗ್ಗೆ ಪೋಲೀಸಿನವರ ಕಿರುಕುಳ

ಶ್ರೀ ರಾಮಭಟ್.—ಮಾನ್ಯ ಅಧ್ಯಕ್ಷರೆ, ನಮ್ಮದು ಕರ್ನಾಟಕ ರಾಜ್ಯ. ನಮ್ಮ ಅಧಿಕೃತ ಭಾಷೆ ಕನ್ನಡ. ಹೀಗಿದ್ದರೂ ಖಾಸಗಿ ಮತ್ತು ಸರ್ಕಾರಿ ವಾಹನಗಳ ಮೇಲೆ ಕನ್ನಡದಲ್ಲಿ ಬರೆದಂಥ ನಂಬರ್ ಪ್ಲೇಟ್‌ಗಳ ಬಗ್ಗೆ ಆಕ್ಷೇಪಣೆ ಮಾಡಿ ಜನರಿಗೆ ಪೋಲೀಸರು ಕಿರುಕುಳ ಕೊಡುತ್ತಿದ್ದಾರೆ.

ಅಧ್ಯಕ್ಷರು.—ಆ ನೋಟೀಸ್ ನನಗೂ ಬಂದಿದೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—ನಮ್ಮ ಸರ್ಕಾರ ಯಾವಾಗ ಕನ್ನಡವನ್ನು ಕಡ್ಡಾಯ ಆಡಳಿತ ಭಾಷೆ ಎಂದು ತೀರ್ಮಾನ ತೆಗೆದುಕೊಂಡಿತೋ ಆಗಲೇ (ಅಂದರೆ ಕಳೆದ ವರ್ಷ ಫೆಬ್ರುವರಿ ೧೫ ರಂದು ಅದು ಜಾರಿಗೆ ಬಂತು) ಮುಖ್ಯ ಕಾರ್ಯದರ್ಶಿಗಳನ್ನು ಕರೆಸಿ ನಾನು ಹೇಳಿದೆ ಕಾರಿನ ನಂಬರ್ ಪ್ಲೇಟುಗಳನ್ನು ಕನ್ನಡದಲ್ಲಿ ಬರೆಯಬೇಕು ಎಂದು. ಆಗ ಅವರು ಹೇಳಿದರು ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಆ ರೀತಿ ಮಾಡಬೇಕಾದರೆ ಮೋಟಾರ್ ವೆಹಿಕಲ್ಸ್ ಆಕ್ಟ್ ತಿದ್ದುಪಡಿ ಮಾಡಬೇಕು ಎಂದು. ಅದರ ಪ್ರಕಾರ ಇಂಗ್ಲೀಷಿನಲ್ಲಿ ಬರೆಯಬೇಕೆಂದಿದೆ. ಕನ್ನಡದಲ್ಲಾಗಲೀ ಅಥವಾ ಬೇರೆ ಭಾಷೆಯಲ್ಲಾಗಲೀ ಬರೆದರೆ ಅದು ಆಫೆನ್ಸ್ ಆಗುತ್ತದೆ, ಕಾಯಿದೆ ಭಂಗ ವಾಗುತ್ತದೆ. ಅದಕ್ಕಾಗಿ ಕಾಯಿದೆ ತಿದ್ದುಪಡಿ ಮಾಡೋಣ. ಮತ್ತು ಒಂದು ಮಾತನ್ನು ಹೇಳುವುದಾದರೆ ಅದರಲ್ಲಿರತಕ್ಕದ್ದು ಕೇವಲ ಗುರುತು ಎಂದು ತಿಳಿದುಕೊಳ್ಳಬೇಕು. ಅದು ಭಾಷೆಯಲ್ಲ: ಮೂರು ಅಕ್ಷರ ಇರುತ್ತದೆ. ನಾಲ್ಕೈದು ಸಂಖ್ಯೆಗಳಿರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಧಿಕಾರಿಗಳು ಇದನ್ನು ಹುಡುಕಿಕೊಂಡು ಏತಕ್ಕೆ ಕೇಸ್ ಹಾಕುತ್ತಾರೆ? ಅವರಿಗೆ ಮಾಡುವುದಕ್ಕೆ ಬೇರೆ ಕೆಲಸ ಇಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.—ಉದಾಹರಣೆಗೆ ನಮ್ಮ ಕಾರು ತೆಗೆದುಕೊಂಡು ಬೇರೆ ರಾಜ್ಯಗಳಿಗೆ ಹೋಗುತ್ತೇವೆ. ಮಹಾರಾಷ್ಟ್ರಕ್ಕೆ ಹೋಗಬಹುದು, ಕೇರಳಕ್ಕೆ ಹೋಗಬಹುದು. ಅಕಸ್ಮಾತ್ತಾಗಿ ನಮ್ಮ ಕಾರಿಗೆ ಏನಾದರೂ ತೊಂದರೆಯಾಯಿತು ಎಂದಿಟ್ಟುಕೊಳ್ಳಿ. ಅಥವಾ ಕಾರನ್ನು ಕದ್ದು ಕೊಂಡು ಹೋದರು ಎಂದಿಟ್ಟುಕೊಳ್ಳಿ. ಆಗ ಪೋಲೀಸರು ಪತ್ತೆ ಹಚ್ಚುವುದು ಹೇಗೆ? ಆದ್ದರಿಂದ ಹೇಳುತ್ತಿದ್ದೇನೆ, ಇದನ್ನು ಎಲ್ಲಿಯವರೆಗೆ ಒಯ್ಯಬಹುದೋ ಅಲ್ಲಿಯವರೆಗೆ ಒಯ್ಯಬಹುದು. ನಾನು ಇದಕ್ಕೆ ವಿರೋಧಿಯಲ್ಲ. ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿದ ಮೇಲೆ ನನ್ನ ಮೊದಲ ಪ್ರತಿಕ್ರಿಯೆ ಏನೆಂದರೆ...

ಶ್ರೀ ಎಂ. ವೀರಪ್ಪ ಮೊಯಿಲಿ.—ಮುಂದೆ ಕನ್ನಡ, ಹಿಂದೆ ಇಂಗ್ಲೀಷ್ ಬೋರ್ಡ್ ಹಾಕುವಂತೆ ಮಾಡಿ. ಎಲ್ಲಿ ಹೋದರೂ ಗೊತ್ತಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಕಳ್ಳಕಾಕರಿಗೆ ಅದರಿಂದ ಅನುಕೂಲವಾಗುತ್ತದೆ. ಹಿಂದೆ ಬೇರೆ ನಂಬರ್ ಬರೆದುಕೊಳ್ಳುತ್ತಾರೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ನಿನ್ನೆ ದಿವಸ ಮೆಡಿಕಲ್ ಸ್ಟೂಡೆಂಟ್ಸ್ ಬಗ್ಗೆ ಹೇಳಿದ್ದೆ. ಮಂತ್ರಿಗಳಿದ್ದಾರೆ ಉತ್ತರ ಕೊಡಿಸಿ.

ಅಧ್ಯಕ್ಷರು.—ಕುಳಿತುಕೊಳ್ಳಿ, ಆಮೇಲೆ ನೋಡೋಣ. ಶ್ರೀ ಕೆ.ಜಿ. ಮಹೇಶ್ವರಪ್ಪನವರು ತಮ್ಮ ವಿಷಯವನ್ನು ಪ್ರಸ್ತಾಪ ಮಾಡಿ.

## (x) ದಾವಣಗೆರೆ ತಾಲ್ಲೂಕಿನ ತುಳಚಿಘಟ್ಟ ಗ್ರಾಮದಲ್ಲಿ ಬೀಡಿ ಕಾರ್ಮಿಕರ ೭೦ ಗುಡಿಸಲುಗಳ ಭಸ್ಮವಾಗಿರುವ ಬಗ್ಗೆ

ಶ್ರೀ ಕೆ.ಜಿ. ಮಹೇಶ್ವರಪ್ಪ.—ತುಳಚಿಘಟ್ಟ ಗ್ರಾಮದಲ್ಲಿ ಬೀಡಿ ಕಾರ್ಮಿಕರ ೭೦ ಗುಡಿಸಲು ಗಳು ಭಸ್ಮವಾಗಿವೆ. ನನ್ನ ಕ್ಷೇತ್ರವಾದ ನಿಟ್ಟವಳ್ಳಿಯಲ್ಲಿ ೩೬ ಹರಿಜನರ ಮನೆಗಳು ಸುಟ್ಟು ಭಸ್ಮ ವಾಗಿವೆ, ಇವೆರಡೂ ಭಯಾನಕವಾದ ಬೆಂಕಿ ಅನಾಹುತಗಳು. ಇದರ ಬಗ್ಗೆ ತೀವ್ರವಾದ ಕ್ರಮ ವನ್ನು ತೆಗೆದುಕೊಂಡು ವಿಶೇಷ ಪರಿಹಾರ ಕೊಡುವ ಅವಶ್ಯಕತೆ ಇದೆ.